## 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ
## ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಸ್ಪೆಷಲ್ ಕೇಸ ನಂಃ 290/2022

ಪಿಡಬ್ಲು :18 ಸಿಡಬ್ಲು :33

ಸಾಕ್ಷಿಯ ಹೆಸರು : ಶ್ರೀಪಾದ ಜಲ್ದೆ

ಗಂಡನ ಹೆಸರು : ಶ್ರೀ. ದಶರತ ಜಲ್ದೆ

ವಯಸ್ಸು : 47 ವರ್ಷ

ಉದ್ಯೋಗ : ಡಿ.ವೈ.ಎಸ್.ಪಿ ಹೆಸ್ಕಾಂ. ಹುಬ್ಬಳಿ.

ವಾಸ್ತವ್ಯ : ಹುಬ್ಬಳಿ.

ದಿನಾಂಕ : 06-06-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿ 25-07-2022 ರಿಂದ 28-08-2024 ರ ವರೆಗೆ ಬೆಳಗಾವಿ ಜಿಲ್ಲೆಯ ಅಥಣಿ ಉಪ ವಿಭಾಗದಲ್ಲಿ ಡಿ.ವೈ.ಎಸ್.ಪಿ ಆಗಿ ಕರ್ತವ್ಯ ನಿರ್ವಹಿದ್ದೇನೆ.

2. ದಿನಾಂಕಃ 16-09-2022 ರಂದು ಬೆಳಗಾವಿ ಜಿಲ್ಲಾ ಆರಕ್ಷಕ ಅಧೀಕ್ಷಕರ ಆದೇಶದ ಮೇರೆಗೆ ಐಗಳಿ ಪೋಲಿಸ ಠಾಣೆಯ ಅಪರಾಧ ಸಂಖ್ಯೆ 109/2022 ರ ತನಿಖೆಯನ್ನು ಚಾಸಾ-32 ಶ್ರೀ ಎಸ್ ಹೆಚ್ ಪವಾರ, ಪಿಎಸ್ಐ ಅವರಿಂದ ಪಡೆದುಕೊಂಡು ಅಲ್ಲಿ ವರೆಗೆ ಆಗಿದ್ದ ತನಿಖೆಯನ್ನು ಪರೀಶಿಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿದ್ದೇನೆ. ತನಿಖಾ ಆದೇಶವನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-30 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವಿಕೃತಿ ಸಹಿಯನ್ನು ನಿಪಿ-30 [ಎ] ಎಂದು ಗುರುತಿಸಲಾಯಿತು.

3. ದಿ 16-09-2022 ರಂದು ಚಾಸಾ-25 ಶ್ರೀ.ಬಿ.ಬಿ.ಪಾಟೀಲ, ಸಿ.ಹೆಚ್.ಸಿ 914 ರವರು ದೂರು ನೀಡಲು ಠಾಣೆಗೆ ಬಂದಿದ್ದ 1 ನೇ ಆರೋಪಿಯನ್ನು ವಶಕ್ಕೆ ಪಡೆದುಕೊಂಡು ನನ್ನ ಮುಂದೆ ರಾತ್ರಿ 10.00 ಗಂಟೆಗೆ ಹಾಜರು ಮಾಡಿದನು. ನಾನು ಆರೋಪಿಯನ್ನು ವಿಚಾರಣೆಯನ್ನು ಮಾಡಿದ್ದು ಆ ಸಮಯದಲ್ಲಿ ಆರೋಪಿಯು ಕೃತ್ಯ ಎಸಗಿರುವುದಾಗಿ ಒಪ್ಪಕೊಂಡಿದ್ದರಿಂದ ಆತನ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ದಸ್ತರಿಗಿ ಮಾಡಿದ್ದೇನೆ.

4. ದಿ 17-09-2022 ರಂದು ಬೆಳಿಗ್ಗ 12.30 ರಿಂದ 1.00 ಗಂಟೆಯ ವರೆಗೆ 1 ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ನಂತರ ಉಳಿದ ಆರೋಪಿತನ್ನು ಪತ್ತೆ ಮಾಡುವಂತೆ ಚಾಸಾ-32 ರವರಿಗೆ ಜ್ಞಾಪನಾ ನೀಡಿದ್ದೇನೆ. ಜ್ಞಾಪನಾ ಪತ್ರವನ್ನು ನಿಪಿ-31 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-31 [ಎ] ಎಂದು ಗುರುತಿಸಲಾಯಿತು. 1 ನೇ ಆರೋಪಿಯನ್ನು ಠಾಣೆಯಲ್ಲಿ ಸುರಕ್ಷಿತವಾಗಿರಿಸಿದ್ದೇನು. ಬೆಳಗಿನ ಜಾವ 7.45 ರ ಸಮಯಕ್ಕೆ ನಾನು ಐಗಳಿ ಪೋಲಿಸ ಠಾಣೆಗೆ ಭೇಟಿ ನೀಡಿದ್ದೇನೆ. ಆ ಸಮಯದಲ್ಲಿ ಚಾಸಾ-32 ರವರು ಈ ಪ್ರಕರಣದ 3 ಜನ ಆರೋಪಿತರಾದ, 2 ನೇ ಆರೋಪಿ ಸುರೇಶ ಮಾಳಿ,4 ನೇ ಆರೋಪಿ ಬಸಪ್ಪ ಮಾಳಿ ಮತ್ತು 5ನೇ ಆರೋಪಿ ಅಪ್ಪಸಾಬ ಮಾಳಿ ಇವರುಗಳನ್ನು ವರದಿಯೊಂದಿಗೆ ನನ್ನ ಮುಂದೆ ಹಾಜರು ಮಾಡಿದ್ದರು. ವರದಿಯನ್ನು ನಿಪಿ-32 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವಿಕೃತಿ ಸಹಿಯನ್ನು ನಿಪಿ-32[ಎ] ಎಂದು ಗುರುತಿಸಲಾಯಿತು. ನಂತರ ನಾನು 3 ಜನ ಆರೋಪಿತರನ್ನು ವಿಚಾರಿಸಿದ್ದು, ಸದರಿಯವರು ಕೃತ್ಯ ಎಸಗಿರುವುದಾಗಿ ಒಪ್ಪಿಕೊಂಡಿದ್ದರಿಂದ ದಸ್ತಗಿರಿ ಮಾಡಿದ್ದೇನೆ. 2 ನೇ ಆರೋಪಿ ಸುರೇಶ ಮಾಳಿ ಇವರು ನನ್ನ ಮುಂದೆ ಸ್ವ ಇಚ್ಚೆ ಹೇಳಿಕೆ ನೀಡಿದ್ದಾರೆ.

5. 1 ನೇ ಆರೋಪಿ ಮಲ್ಲೇಶ ಮಾಳಿ ಇವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ " ಗುನ್ನೆ

ಮಾಡಲು ಉಪಯೋಗಿಸಿದ ಮುದ್ದೆ ಮಾಲುಗಳನ್ನು ಮುಚ್ಚಿಟ್ಟಿರುತ್ತೇನೆ ಸಂಗಡ ನನಗೆ ಕರೆದುಕೊಂಡು ಹೋದರೆ ಅವುಗಳನ್ನು ತೆಗೆದು ತಮ್ಮ ಮುಂದೆ ಹಾಜರು ಮಾಡುತ್ತೇನೆ. " ಆರೋಪಿಯ ಹೇಳಿಕೆಯ ಭಾಗವನ್ನು ನಿಪಿ–33 ಎಂದು ಎಂದು ಗುರುತಿಸಲಾಯಿತು. ಕೃತ್ಯಕ್ಕೆ ಬಳಸಿದ ವಸ್ತುಗಳಾದ ಒಂದು ಮೋಟರ ಸೈಕಲ ಹಾಗೂ ಎರಡು ಕೇಬಲ್ ವಾಯರ್ ಗಳು ಮತ್ತು ರಾಗೋಲ್ ನ್ನು ಹಾಜರು ಮಾಡುತ್ತೇನೆಂದು ಹೇಳಿಕೆ ನೀಡಿದ್ದನು. ಅದರಂತೆ ನಾನು ಇಬ್ಬರು ಸಾಕ್ಷಿದಾರಾದ ಚಾಸಾ–4 ಪ್ರಾಸಾ–5 ಮಂಜುನಾಥ ಅಂಬಾಜಿ, ಚಾಸಾ–5 ಪ್ರಾಸಾ–6 ಸಿದ್ದಪ್ಪ ಸವದಿ ಇವರುಗಳನ್ನು ಠಾಣೆಗೆ ಕರೆಸಿಕೊಂಡು, ವಿಚಾರ ತಿಳಿಸಿ 1 ನೇ ಆರೋಪಿಯ ಹೇಳಿಕೆಯಂತೆ 1 ನೇ ಆರೋಪಿಯು ಹೇಳಿ ತೋರಿಸಿದ ಸುಟ್ಟಟ್ಟಿ ಗ್ರಾಮದ ಹದ್ದಿಯಲ್ಲಿನ ಒಂದು ಜಮೀನಿನಲ್ಲಿನ ಬಾವಿ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿ ಇಟ್ಟಿದ್ದಂತಹ ಮೋಟರ ಸೈಕಲ ನಂ.ಕೆಎ–23/ಇಡಿ–2832 ಹೆಚ್ ಎಫ್ ಡಿಲಕ್ಸನ್ನು ತೋರಿಸಿ ಹಾಜರು ಮಾಡಿದನು. ಅದನ್ನು ಸಾಕ್ಷಿದಾರರ ಸಮಕ್ಷಮ ಪಂಚನಾಮಾ ಮಾಡಿ ಜಪ್ತು ಮಾಡಿದ್ದೇನೆ. ಮತ್ತು ಅದೇ ಸ್ಥಳದಲ್ಲಿದ್ದ ಎರಡು ಕೇಬಲ್ ವೈರಗಳನ್ನು ಜಪ್ತು ಮಾಡಿದ್ದೇನೆ. ಮೋಟರ ಸೈಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ಮು.ಮಾ–1 ಗುರುತಿಸಲಾಗಿದೆ (ಮು.ಮಾ–1 4 ನೇ ಆರೋಪಿ ನ್ಯಾಯಾಲಯದ ಆದೇಶದ ಪ್ರಕಾರ ಮಧ್ಯಂತರ ವಶಕ್ಕೆ ಪಡೆದುಕೊಂಡಿರುತ್ತಾರೆ). ಪಂಚನಾಮಾ ಸಮಯದಲ್ಲಿ 4 ಪೋಟೊಗಳನ್ನು ತೆಗೆಯಲಾಗಿದೆ. ಪಂಚನಾಮೆಯನ್ನು ನಿಪಿ–12 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–12 [ಸಿ] ಎಂದು ಗುರುತಿಸಲಾಯಿತು. ಮತ್ತು ಆ ಸಮಯದಲ್ಲಿ ತೆಗೆಯಲಾದ ಪೋಟೊಗಳನ್ನು ಸಾಕ್ಷಿ ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ನಿಪಿ–13, ನಿಪಿ–14, ನಿಪಿ–15 ಮತ್ತು ನಿಪಿ–16 ಎಂದು ಗುರುತಿಸಲಾಗಿದೆ. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಕಪ್ಪು ಬಣ್ಣದ ಎರಡು ಕೇಬಲ್ ವಾಯರಗಳನ್ನು ಸಾಕ್ಷಿ ಗುರುತಿಸಿದ್ದಾರೆ. ಅವುಗಳನ್ನು ಮು.ಮಾ.3 ಮತ್ತು 4 ಎಂದು ಗುರುತಿಸಲಾಗಿದೆ.

6. 1 ನೇ ಆರೋಪಿ ತಮ್ಮ ಮನೆಯ ಶೇಡ್‌ಗೆ ಕರೆದುಕೊಂಡು ಹೋಗಿ ಅಲ್ಲಿ ಇರಿಸಿದ್ದ ರಾಗೋಲ್ ನ್ನು ಹಾಜರುಪಡಿಸಿದರು. ಆ ಸಮಯದಲ್ಲಿ ಮೂರು ಫೋಟೊಗಳನ್ನು ತೆಗೆಯಲಾಗಿದೆ ಎಂದು ಹೇಳಿ ಫೋಟೊಗಳನ್ನು ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ನಿಪಿ-17, ನಿಪಿ-18 ಮತ್ತು ನಿಪಿ-19 ಎಂದು ಗುರುತಿಸಲಾಗಿದೆ.

7. ನಂತರ ಠಾಣೆಗೆ ಹಾಜರಾಗಿ ನಾಲ್ಕು ಜನ ಆರೋಪಿತರಿಗೆ ವೈಧ್ಯಕೀಯ ಪರೀಕ್ಷೆ ಮಾಡಿಸಿ, ರಿಮಾಂಡ ಅರ್ಜಿ ತಯಾರಿಸಿ ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನಂತರ ನಾಲ್ಕು ಜನ ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು ಮತ್ತು ಜಪ್ತಾದ ವಸ್ತುಗಳನ್ನು ಠಾಣಾ ಸ್ವತ್ತು ಪಟ್ಟಿ ಸಂಖ್ಯೆ 73/2022 ರಂತೆ ಪಟ್ಟಿ ತಯಾರಿಸಿ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಿಕೊಟ್ಟಿದ್ದೇನೆ. ಪಟ್ಟಿಯನ್ನು ನಿಪಿ-34 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-34 [ಎ] ಎಂದು ಗುರುತಿಸಲಾಯಿತು. .

8. ನಂತರ ದಿ 17-09-2022 ಸಾಕ್ಷಿದಾರರಾದ ಚಾಸಾ-1 ಫ್ರಾಸಾ-1 ಸುನೀಲ ಗಾಡಿವಡ್ಡರ, ಚಾಸಾ-10 ಫ್ರಾಸಾ-9 ಅಶೋಕ ಗಾಡಿವಡ್ಡರ, ಚಾಸಾ-11 ಅಜೀತ ಗಾಡಿವಡ್ಡರ, ಚಾಸಾ-12 ಫ್ರಾಸಾ-7 ರಾಜು ಗಾಡಿವಡ್ಡರ ಇವರುಗಳ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ.

9. ದಿ 17-09-2022 ರಂದು ಚಾಸಾ-1 ಫ್ರಾಸಾ-1 ಸುನೀಲ ಗಾಡಿವಡ್ಡರ ರವರು ಕೃತ್ಯ ನಡೆದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ್ದರಿಂದ ಸಾಕ್ಷಿದಾರರಾದ ಚಾಸಾ-3 ಫ್ರಾಸಾ-2 ಮಾಯಪ್ಪ, ಚಾಸಾ-3 ಫ್ರಾಸಾ-3 ಮಹಾವೀರ ಇವರುಗಳನ್ನು ಸ್ಥಳದಲ್ಲಿ ಕರೆಸಿಕೊಂಡು, ಆರೋಪಿತರು ಹಲ್ಲೆ ಮಾಡಿದ ಸ್ಥಳವಾದ ಆರೋಪಿತರ ಮನೆಯ ಮುಂದೆ ಮಧ್ಯಾಹ್ಞ 15.30 ರಿಂದ 16.30 ರ ವರೆಗೆ ನಿಪಿ-6 ರಂತೆ ಪಂಚನಾಮೆಯನ್ನು ಮಾಡಿದ್ದೇನೆ. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-6[ಸಿ] ಎಂದು

ಗುರುತಿಸಲಾಯಿತು ಮತ್ತು ಆ ಸಮಯದಲ್ಲಿ ಎರಡು ಪೋಟೋಗಳನ್ನು ತೆಗೆಯಲಾಗಿದೆ ಎಂದು ಮತ್ತು ಸ್ಥಳ ನಕ್ಷೆ ತಯಾರಿಸಿದ್ದೇನೆ ಎಂದು ಹೇಳಿದ್ದಾರೆ. ಪೋಟೊವನ್ನು ಈಗಾಗಲೇ ನಿಪಿ3 ಎಂದು ಗುರುತಿಸಲಾಗಿದೆ. ನಕ್ಷೆಯನ್ನು ನಿಪಿ-35 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-35 [ಎ] ಎಂದು ಗುರುತಿಸಲಾಯಿತು.

10. ಅದೇ ದಿನ ದಿನಾಂಕ 17-09-2022 ಚಾಸಾ-1 ರವರು ಸುರೇಶ ಗಾಡಿವಡ್ಡರವರನ್ನು ಅಪಹರಣ ಮಾಡಿದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿ ಸುಟ್ಟಟ್ಟಿ ಗ್ರಾಮದ ಚಾಸಾ-16 ಪ್ರಾಸಾ-15 ಚಂಪವ್ವ ಕರಜಗಿ ಅವರ ಮನೆಯ ಹತ್ತಿರ ಕರೆದುಕೊಂಡು ಹೋಗಿ ರಸ್ತೆಯ ಮೇಲೆ ಸ್ಥಳ ತೋರಿಸಿದ್ದು ಸ್ಥಳದಲ್ಲಿ ಸಾಕ್ಷಿದಾರಾದ ಚಾಸಾ-2 ಪ್ರಾಸಾ-2 ಮಾಯಪ್ಪಾ ಚಾಸಾ-3 ಪ್ರಾಸಾ-3 ಮಹಾವೀರ ಇವರುಗಳ ಸಮಕ್ಷಮ 16.45 ರಿಂದ 17.30 ರ ವರೆಗೆ ನಿಪಿ-7 ರಂತೆ ಪಂಚನಾಮಾ ಮಾಡಿ ದ್ದೇನೆ. ಪಂಚನಾಮಾ ಮೇಲಿ ಸಾಕ್ಷಿಯ ಸಹಿಯನು ನಿಪಿ-7[ಸಿ] ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆಯಲಾದ ಪೋಟೊಗಳನ್ನು ಸಾಕ್ಷಿ ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಲಾಗಿದೆ.

11. ದಿನಾಂಕ 18-09-2022 ರಂದು ಸಾಕ್ಷಿದಾರರಾದ ಚಾಸಾ-15 ಪ್ರಾಸಾ-12 ಸಾಬು ಮಾಳಿ , ಚಾಸಾ-14 ಪ್ರಾಸಾ-11 ಹಣಮಂತ, ಚಾಸಾ-17 ಪ್ರಾಸಾ-14 ರಾಜಶ್ರೀ ಬಾಸಿಂಗೆ, ಚಾಸಾ-16 ಪ್ರಾಸಾ-15 ಚಂಪ್ಪವ್ವಾ ಕರಜಗಿ, ಚಾಸಾ-13 ಪ್ರಾಸಾ-10 ಮಲ್ಲಪ್ಪ, ಇವರುಗಳ ಹೇಳಿಕೆಯನ್ನು ಪಡೆದುಕೊಂಡು, ಪ್ರಕ್ರೀಯೆಯನ್ನು ವೀಡಿಯೊಗ್ರಾಫಿ ಮಾಡಿಸಿದ್ದೇನೆ. ಚಾಸಾ-13 ಪ್ರಾಸಾ-10 ಮಲ್ಲಪ್ಪ ರವರು ನಿಪಿ-22 ಮತ್ತು ನಿಪಿ-23 ರಂತೆ ಚಾಸಾ-14 ಪ್ರಾಸಾ-11 ನಿಪಿ-24 ರಂತೆ, ಚಾಸಾ-15 ಪ್ರಾಸಾ-12 ಸಾಬು ಮಾಳಿ ನಿಪಿ-25 ರಂತೆ, ಚಾಸಾ-16 ಪ್ರಾಸಾ-15 ಚಂಪ್ಪವ್ವಾ ಕರಜಗಿ ನಿಪಿ-26 ರಂತೆ ಹೇಳಿಕೆಗಳನ್ನು ನೀಡಿದ್ದಾರೆ.

12. ದಿನಾಂಕ19-09-2022 ರಂದು ಆರೋಪಿತರ, ದೂರುದಾರರ ಮತ್ತ ಗಾಯಾಳುಗಳ ಜಾತಿ ಪ್ರಮಾಣ ಪತ್ರ ನೀಡುವಂತೆ ತಹಶೀಲ್ದಾರ ರವರಿಗೆ ಮನವಿ ಮಾಡಿ ಜಾತಿ ಪ್ರಮಾಣ ಪತ್ರವನ್ನು ನಿಪಿ-29 ರಂತೆ ಪಡೆದುಕೊಂಡಿದ್ದೇನೆ.

13. ದಿನಾಂಕ19-09-2022 ರಂದು ಸುಟ್ಟಟ್ಟಿ ಗ್ರಾಮದ ಪಿ.ಡಿ.ಒ ರವರಿಗೆ ಕೃತ್ತ ನಡೆದ ಸ್ಥಳದ ಉತಾರೆಯನ್ನು ನೀಡುವಂತೆ ಮನವಿ ಮಾಡಿ ಉತಾರೆಯನ್ನು ಪಡೆದುಕೊಂಡಿದ್ದೇನೆ. ಮನಿವಿಯನ್ನು ನಿಪಿ-36 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-36 [ಎ] ಎಂದು ಗುರುತಿಸಲಾಯಿತು. 1 ನೇ ಆರೋಪಿತಯ ತಂದೆಯ ಹೆಸರಿನಲ್ಲಿರುವ ಕರ ನಿರ್ಧರಣ ಪಟ್ಟಿಯನ್ನು ನಿಪಿ-37 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-37 [ಎ] ಎಂದು ಗುರುತಿಸಲಾಯಿತು.

14. ದಿನಾಂಕ 22-09-2022 ರಂದು ಚಾಸಾ-18 ರವರಿಂದ ಪಂಚನಾಮಾ ಸಮಯದಲ್ಲಿ ಪೋಟೊ ತೆಗೆದ ಬಗ್ಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಪ್ರಕಾರ ದೃಡಿಕರಣ ಪತ್ರವನ್ನು ತೆಗೆದುಕೊಂಡಿದ್ದೇನೆ. ಅದನ್ನು ನಿಪಿ-38 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವಿಕೃತಿ ಸಹಿಯನ್ನು ನಿಪಿ-38 [ಎ] ಎಂದು ಗುರುತಿಸಲಾಯಿತು.

15. ದಿನಾಂಕ 26-09-2022 ರಂದು ಚಾಸಾ-18 ಫ್ರಾಸಾ-16 ರವರಿಗೆ ಗಾಯಾಳುಗಳ ಗಾಯಾಳು ಪ್ರಮಾಣ ಪತ್ರ ನೀಡುವಂತೆ ಮನವಿ ಮಾಡಿ ನಿಪಿ-27 ಮತ್ತು ನಿಪಿ-28 ರಂತೆ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ.

16. ಅದೇ ದಿನ ದಿನಾಂಕ 26-09-2022 ರಂದು ಚಾಸಾ-27 ರವರಿಗೆ ಗಾಯಾಳುಗಳ ಸುರೇಶ ಗಾಡಿವಡ್ಡರ ಅವರ ಗಾಯದ ಪ್ರಮಾಣ ಪತ್ರ ನೀಡುವಂತೆ ಮನವಿ ಮಾಡಿ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ. ಮನಿಯನ್ನು ನಿಪಿ-39 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-39 [ಎ] ಎಂದು

ಗುರುತಿಸಲಾಯಿತು. ಗಾಯದ ಪ್ರಮಾಣ ಪತ್ರವನ್ನು ನಿಪಿ–40 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವಿಕೃತಿ ಸಹಿಯನ್ನು ನಿಪಿ–40 [ಎ] ಎಂದು ಗುರುತಿಸಲಾಯಿತು.

17. ಅದೇ ದಿನ ದಿನಾಂಕ 26–09–2022 ರಂದು ಚಾಸಾ–29 ಫ್ರಾಸಾ–17 ರವರಿಗೆ ಗಾಯಾಳುಗಳ ಸಾಬು ಬಾಳು ಗಾಡಿವಡ್ಡರ ಅವರ ಗಾಯದ ಪ್ರಮಾಣ ಪತ್ರ ನೀಡುವಂತೆ ಮನವಿ ಮಾಡಿ ನಿಪಿ–28 ರಂತೆ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–28 [ಬಿ] ಎಂದು ಗುರುತಿಸಲಾಯಿತು.

18. ಅದೇ ದಿನ ದಿನಾಂಕ 26–09–2022 ರಂದು ಚಾಸಾ–30 ರವರಿಗೆ ಕೃತ್ಯ ನಡೆದ ಸ್ಥಳದ ನಕ್ಷೆ ತಯಾರಿಸಿ ಕೊಡುವಂತೆ ಮನವಿಯನ್ನು ಮಾಡಿ ನಂತರ ನಕ್ಷೆಯನ್ನು ಪಡೆದುಕೊಂಡಿದ್ದೇನೆ. ಮನವಿಯನ್ನು ನಿಪಿ–41 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–41 [ಎ] ಎಂದು ಗುರುತಿಸಲಾಯಿತು. ಚಾಸಾ–30 ರವರು ನೀಡಿದ ಪತ್ರವನ್ನು ನಿಪಿ–42 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವಿಕೃತಿ ಸಹಿಯನ್ನು ನಿಪಿ–42 [ಎ] ಎಂದು ಗುರುತಿಸಲಾಯಿತು. ನಕ್ಷೆಯನ್ನು ನಿಪಿ–43 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–43 [ಎ] ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ನ್ಯಾಯಾಲಯದ ಮಧ್ಯಾಹ್ನದ ಅವಧಿ ಮುಗಿದಿದ್ದರಿಂದ, ಮುಂದುವರೆದ ಮುಖ್ಯ ವಿಚಾರಣೆ ಮಧ್ಯಾಹ್ನದ ಅವಧಿಗೆ ಕಾಯ್ದಿರಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕ : 06-06-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

19. ದಿ 26-09-2022 ರಂದು ಆರ್.ಟಿ.ಓ. ಅಥಣಿ ಇವರಿಂದ ಮು.ಮಾ-1 ಮೋಟರ ಸೈಕಲಗೆ ಸಂಬಂಧಿಸಿದಂತೆ ಬಿ ಎಕ್ಸಾಟ್ರಕ್ಟನ್ನು ಪಡೆದುಕೊಂಡಿದ್ದೇನೆ.

20. ದಿನಾಂಕ 05-10-2022 ರಂದು ಚಾಸಾ-8 ಸುರೇಶ ಗಾಡಿವಡ್ಡರ ಮತ್ತು ಚಾಸಾ-9 ಸಾಬು ಗಾಡಿವಡ್ಡರ ಇವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಚಾಸಾ-8 ಸುರೇಶ ಗಾಡಿವಡ್ಡರ ರವರು ಆರೋಪಿ ತಮ್ಮನ್ನು ಅಪಹರಣ ಮಾಡಿಕೊಂಡು ಹೋಗಿ ಹಲ್ಲೆ ಮಾಡಿದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ್ದರಿಂದ ಸಾಕ್ಷಿದಾರರಾದದ ಚಾಸಾ-6 ಫ್ರಾಸಾ-4 ಬಸವರಾಜ ಮತ್ತು ಚಾಸಾ-7 ಅಪ್ಪಾಸಾಬ ಅವರುಗಳ ಸಮಕ್ಷಮ 16.00 ರಿಂದ 17.00 ಗಂಟೆವರೆಗೆ ನಿಪಿ-9 ರಂತೆ ಪಂಚನಾಮೆಯನ್ನು ಮಾಡಿದ್ದೇನೆ. ಪಂಚನಾಮೆ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-9[ಬಿ] ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಎರಡು ಪೋಟೊಗಳನ್ನು ತೆಗೆಯಲಾಗಿದೆ. ಪೋಟೊಗಳನ್ನು ಈಗಾಗಲೇ ನಿಪಿ-10 ಮತ್ತು 11 ಎಂದು ಗುರುತಿಸಲಾಗಿದೆ.

21. ದಿನಾಂಕ 05-10-2022 ರಂದು ಚಾಸಾ-23 ಶ್ರಿ.ಎ.ಎ ಹಾರೂಗೇರಿ ಪಿ.ಸಿ.ನಂ.3802 ಇವರು ಸಾಕ್ಷಿದಾರರ ಹೇಳಿಕೆಗಳನ್ನು ವೀಡಿಯೊಗ್ರಾಫಿ ಮಾಡಿದ ಬಗ್ಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಅದನ್ನು ನಿಪಿ-44 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವಿಕೃತಿ ಸಹಿಯನ್ನು ನಿಪಿ-44[ಎ] ಎಂದು ಗುರುತಿಸಲಾಯಿತು.

22. ಅದೇ ರೀತಿಯಾಗಿ ದಿನಾಂಕ 05-10-2022 ರಂದು ಚಾಸಾ-21 ಶ್ರಿ.ಆರ್.ಪಿ

ಕೊನ್ನೂರ ಪಿ.ಸಿ.ನಂ.1515 ಇವರು ಸಾಕ್ಷಿದಾರರ ಹೇಳಿಕೆಗಳನ್ನು ವೀಡಿಯೊಗ್ರಾಫಿ ಮಾಡಿದ ಬಗ್ಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಅದನ್ನು ನಿಪಿ–45 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವಿಕೃತಿ ಸಹಿಯನ್ನು ನಿಪಿ–45[ಎ] ಎಂದು ಗುರುತಿಸಲಾಯಿತು.

23. ದಿನಾಂಕ 14–11–2022 ರಂದು ತನಿಖೆಯನ್ನು ಪೂರ್ಣಗೊಳಿಸಿ ಎಲ್ಲಾ ಆರೋಪಿತರ ವಿರುದ್ಧ ಸಾಕ್ಷಾಧಾಗಳು ಕಂಡು ಬಂದಿದ್ದರಿಂದ ದೋಷರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ. ತನಿಖಾ ಸಮಯದಲ್ಲಿ ದಸ್ತಗಿರಿ ಮಾಡಿದ 4 ಜನ ಆರೋಪಿತರ ಸಾಕ್ಷಿ ಗುರುತಿಸಿದ್ದಾರೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ಎಮ್.ಎಸ್.ಪಿ ವಕೀಲರಿಂದ**

24. ಈ ಪ್ರಕರಣದಲ್ಲಿ ನಾನು 4 ಪಂಚನಾಮೆಗಳನ್ನು ಮಾಡಿದ್ದೇನೆ ಎಂದರೆ ಸರಿ. ಆ ಪಂಚನಾಮೆಗಳನ್ನು ಟೈಪ ಮಾಡಲಾಗಿದೆ ಎನ್ನುವುದು ಸರಿ. 4 ಪಂಚನಾಮಾಗಳ ಮೇಲೆ ಅದನ್ನು ಟೈಪ ಮಾಡಿದವರ ಸಹಿ ಇಲ್ಲ ಎನ್ನುವುದು ಸರಿ. ಚಾಸಾ–25 ರವರು 1 ನೇ ಆರೋಪಿಯನ್ನು ನನ್ನ ಮುಂದೆ ಹಾಜರು ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 1 ನೇ ಆರೋಪಿ ಸ್ವ ಇಚ್ಚೆ ಹೇಳಿಕೆ ನೀಡಿದ್ದಾರೆ ಎಂದು ಅವರ ಹೆಸರಿನಲ್ಲಿ ಒಂದು ಹೇಳಿಕೆಯನ್ನು ಸೃಷ್ಟಿ ಮಾಡಲಾಗಿದೆ ಎನ್ನುವುದು ಸರಿಯಲ್ಲ. ಚಾಸಾ–32 ರವರು 2, 4 ಮತ್ತು 5 ನೇ ಆರೋಪಿತರನ್ನು ನನ್ನ ಮುಂದೆ ಹಾಜರು ಮಾಡಿಲ್ಲ ಎನ್ನುವುದು ಸರಿಯಲ್ಲ.

25. ಈ ಪ್ರಕರಣದಲ್ಲಿ ಎಲ್ಲ ಪಂಚನಾಮಾಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿ ಮಾಡಲಾಗಿದೆ ಎನ್ನುವುದು ಸರಿಯಲ್ಲ. ಚಾಸಾ–2, ಚಾಸಾ–3, ಚಾಸಾ–6 ಮತ್ತು ಚಾಸಾ–7 ರವರು ನಮ್ಮ ಠಾಣೆಯ ಖಾಯಂ ಪಂಚ ಸಾಕ್ಷಿದಾರರು ಎನ್ನುವುದು

ಸರಿಯಲ್ಲ. ಮು.ಮಾ–1 ರಿಂದ 4 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎನ್ನುವುದು ಸರಿಯಲ್ಲ. ಮು.ಮಾ–1 ರಿಂದ 4 ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ಯಾವುದೇ ಸಾಕ್ಷಿದಾರರು ನನ್ನ ಮುಂದೆ ಹೇಳಿಕೆ ನೀಡಿಲ್ಲ ಎನ್ನುವುದು ಸರಿಯಲ್ಲ. ನಾನು ಅಂತಹ ಹೇಳಿಕೆಗಳನ್ನು ಸೃಷ್ಟಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

26. ನಿಪಿ–27, ನಿಪಿ–28, ನಿಪಿ–40 ಗಾಯದ ಪ್ರಮಾಣ ಪತ್ರಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಲಾಗಿದೆ ಎನ್ನುವುದು ಸರಿಯಲ್ಲ. ತನಿಖಾ ಸಮಯದಲ್ಲಿ ಆರೋಪಿರಿಗೂ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದು ಕಂಡು ಬಂದರೂ ಸಹ ನಾನು ಸುಳ್ಳು ದೋಷಾರೊಪಣ ಪತ್ರವನ್ನು ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.